**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.319/2023**

**CW - 4 PW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ವಿನೋದ್ ಕುಮಾರ್ |
| ತಂದೆ | ಃ | ಸಣ್ಣ ವೀರಾರೆಡ್ಡಿ |
| ವಯಸ್ಸು | ಃ | 36 |
| ಉದ್ಯೋಗ | ಃ | ಮುಖ್ಯ ಪೇದೆ |
| ವಾಸಸ್ಥಳ | ಃ | ಯಾಪಲದಿನ್ನಿ |
| ಪ್ರಮಾಣಿಕರಿಸಿದ ದಿನಾಂಕ | ಃ | **22-01-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ನಾನು 19-02-2020 ರಿಂದ 10-08-2024 ವರೆಗೆ ಗಬ್ಬೂರು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.01-06-2022 ರಂದು ಮಧ್ಯಾಹ್ನ 3-30 ಕ್ಕೆ ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ಬಾತ್ಮಿ ಮತ್ತು ದಾಳಿ ಕುರಿತು ತಿಳಿಸಿದ್ದು, ಪಂಚರನ್ನು ಬರಮಾಡಿಕೊಂಡು ಎಲ್ಲರೂ ಸೇರಿ 3-45 ಕ್ಕೆ ಠಾಣೆಯಿಂದ ಹೋರಟು ಹೆಗ್ಗಡದಿನ್ನಿ ಗ್ರಾಮದ ಹತ್ತಿರ ಹೋಗಿ ವಾಹನವನ್ನು ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಓರ್ವ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ಹೋಗಿ ಬರುವ ಜನರಿಗೆ ಮಟಕಾ ನಂಬರ ಹತ್ತಿದರೆ 1 ರೂ.ಗೆ. 80 ರೂ ಕೊಡುವುದಾಗಿ ಹೇಳುತ್ತಾ ಜನರಿಂದ ನಂಬರ್ ಬರೆದುಕೊಳ್ಳುತ್ತಿದ್ದುದನ್ನು ನೋಡಿ ಖಚಿತ ಪಡಿಸಿಕೊಂಡು ದಾಳಿ ಮಾಡಿದ್ದು ಜನರು ಓಡಿ ಹೋಗಿದ್ದು ಬರೆದು ಕೊಳ್ಳುತ್ತಿರುವ ವ್ಯಕ್ತಿ ಸಿಕ್ಕಿಬಿದ್ದಿದ್ದು ಅತನನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಶರಣಪ್ಪ ತಂದೆ ರುದ್ರಪ್ಪ ಅಂತ ಹೇಳಿದ್ದು ಆತನ ಅಂಗ ಶೋಧನೆ ಮಾಡಲು ಆತನಿಂದ ರೂ.1630/- ಹಣ ಒಂದು ಬಾಲ್ ಪೆನ್ನು ಮತ್ತು 1 ಮಟಕಾ ಚೀಟಿ ದೋರೆತಿದ್ದು ಮಟಕಾ ಚೀಟಿ ಮತ್ತು ಹಣವನ್ನು ಮಯೂರ ಸ್ವಾಮಿ ಇತನಿಗೆ ಕೊಡುವುದಾಗಿ ತಿಳಿಸಿದ್ದು ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು ಹಣ ಮತ್ತು ವಟಕಾ ಚೀಟಿ ಮತ್ತು ಪೆನ್ನುನೊಂದಿಗೆ ಠಾಣೆಗೆ ಬಂದು ದೂರನ್ನು ದಾಖಲಿಸುವಂತೆ ಸೂಚಿಸಿರುತ್ತಾರೆ. ಆ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲು:-</u> 2 ನೇ ಆರೋಪಿ ಪರ ಶ್ರೀ. ಹೆಚ್.ಕೆ ವಕೀಲರಿಂದ.**

ದಾಳಿಗೆ ಹೋದಾಗ 4-00 ಗಂಟೆ ಆಗಿದ್ದು 4-30 ರಿಂದ 5-30 ರ ಅವಧಿಯಲ್ಲಿ ದಾಳಿ ಪಂಚನಾಮೆ ಮಾಡಿರುತ್ತೇವೆ. ನಿಪಿ-1 ದಾಳಿ ಪಂಚನಾಮೆಯಲ್ಲಿ 3-30 ಗಂಟೆಗೆ ಹೋಟೆಲ್ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಹೋಗಿ ಮರೆಯಲ್ಲಿ ನಿಲ್ಲಿಸಿರುತ್ತೇವೆ ಎಂದು ಪಂಚನಾಮೆಯಲ್ಲಿ ಬರೆಯಲಾಗಿದೆ ಅಂದರೆ ಸಾಕ್ಷಿ 3-30 ಕ್ಕೆ ದಾಳಿಗೆ ಠಾಣೆಯಿಂದ ಹೋರಟಿರುತ್ತೇವೆ ಎಂದು ನುಡಿಯುತ್ತಾರೆ. ಅಮಾನತ್ತು ಪಡಿಸಿಕೊಂಡು ಹಣದ ಮುಖ ಬೆಲೆ ಹೇಳಲು ಬರುವುದಿಲ್ಲ. ಮತ್ತು ಪೆನ್ನಿನ ಕಂಪನಿ ಹೆಸರು ಹೇಳಲು ನೆನಪಿರುವುದಿಲ್ಲ. ಮಯೂರ ಸ್ವಾಮಿ ತಾಲೂಕ ಜೆ.ಡಿ.ಎಸ್ ಮುಖಂಡರಾಗಿರುತ್ತಾರೆ ಅಂದರೆ ಸಾಕ್ಷಿ ಸದರಿ ದಾಳಿ ಸಂದರ್ಭದಲ್ಲಿ ಮುಖಂಡರಾಗಿರಲಿಲ್ಲಿ ಈಗ ಆಗಿರಬಹುದು ಎಂದು ನುಡಿಯುತ್ತಾರೆ. ಮಯೂರ ಸ್ವಾಮಿ ದೇವದುರ್ಗದಲ್ಲಿ ಮಟಕಾ ಅವಳಿ ಜಾಸ್ತಿಯಾಗಿದೆ ಎಂದು ಎಸ್.ಪಿ ರಾಯಚೂರು ಇವರಿಗೆ ದೂರನ್ನು ನೀಡಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ಮಯೂರ ಸ್ವಾಮಿ ಎಸ್.ಪಿ ಅವರಿಗೆ ದೂರು ನೀಡಿದ್ದರಿಂದ ಅವರ ಮೇಲಿನ ಸಿಟ್ಟಿನಿಂದ ಆತನ ವಿರುದ್ಧ ಪ್ರಕರಣ ದಾಖಲಿಸಿಲಾಗಿದೆ ಅಂದರೆ ಸರಿಯಲ್ಲ.

ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.